ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01.

**ಸಂಖ್ಯೆ ಸಿ3(1) ಪ್ರಾಶಿ.ನೇಮಕ 02/2014-15** **ದಿನಾಂಕ 01.09.2016**

1. **ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ)**
   **ಸಾರ್ವಜನಿಕ ಶಿಕ್ಷಣ ಇಲಾಖೆ---------**
   **ಇವರಿಗೆ ತುರ್ತು ಕ್ರಮಕ್ಕಾಗಿ**
2. **ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು**
   **ಸಾರ್ವಜನಿಕ ಶಿಕ್ಷಣ ಇಲಾಖೆ-------**
   **ಇವರಿಗೆ ತುರ್ತು ಕ್ರಮಕ್ಕಾಗಿ ಉಪನಿರ್ದೇಶಕರು ಇವರ ಮುಖಾಂತರ,**

ವಿಷಯ: ಸರ್ಕಾರಿ ಪ್ರಾಥಮಿಕ ಶಾಲಾ ಸಹಶಿಕ್ಷಕರ ನೇಮಕಾತಿಯಲ್ಲಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ತುರ್ತಾಗಿ ವೇತನವನ್ನು ಪಾವತಿಸಲು ಅಗತ್ಯ ಕ್ರಮವನ್ನು ವಹಿಸುವ ಬಗ್ಗೆ

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಇಡಿ 626 ಪಿಬಿಎಸ್. 2014 ದಿನಾಂಕ 31.01.2015
2. ರಾಜ್ಯ ಪತ್ರದಲ್ಲಿ ನೇಮಕಾತಿ ಅಧಿಸೂಚನೆ ದಿನಾಂಕ 23.01.2015
3. ನೇಮಕಾತಿಗಾಗಿ ಕೌನ್ಸಲಿಂಗ್ ನಡೆಸಿದ ದಿನಾಂಕ 25.01.2016, 27.01.2016 ಹಾಗೂ 28.01.2016

-*****-

ಉಲ್ಲೇಖ (1)ರ ಸರ್ಕಾರಿ ಆದೇಶದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನೇಮಕಾತಿಯನ್ನು ನಡೆಸಲು ಈ ಕಛೇರಿಯಿಂದ 2511 ಪ್ರಾಥಮಿಕ ಶಾಲಾ ಸಹಶಿಕ್ಷಕರ ವೇತನ ಶ್ರೇಣಿ (13600-26000) ಹುದ್ದೆಗಳು ಹಾಗೂ 7000 ವೇತನ ಶ್ರೇಣಿ 14550-26700ರ ಪ್ರಾಥಮಿಕ ಶಾಲಾ ಪದವೀಧರ ಸಹಶಿಕ್ಷಕರ ಮೇಲ್ದರ್ಜೆಗೇರಿಸಿದ ರಾಜ್ಯ ವಲಯದ ಹುದ್ದೆಗಳನ್ನು ಹಂಚಿಕೆ ಮಾಡಿ ಭರ್ತಿಮಾಡಲು ಈ ಕಛೇರಿಯಿಂದ ಅನುಮತಿಯನ್ನು ನೀಡಲಾಗಿದೆ. ಅದರಂತೆ, ಆಯ್ಕೆ ಪ್ರಾಧಿಕಾರಿಗಳು ಅಧಿಸೂಚನೆಯನ್ನು ಹೊರಡಿಸಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಗೊಂಡಿದೆ.

ಮೇಲಿನ ಹುದ್ದೆಗಳಲ್ಲಿ ರಾಜ್ಯದ 34 ಜಿಲ್ಲೆಗಳಿಂದ ಒಟ್ಟು 1929 ಪ್ರಾಥಮಿಕ ಶಾಲಾ ಅಭ್ಯರ್ಥಿಗಳು ಹಾಗೂ 5976 ಪದವೀಧರ ಸಹಶಿಕ್ಷಕರ ಹುದ್ದೆಯ ಅಭ್ಯರ್ಥಿಗಳು ಉಲ್ಲೇಖ(3)ರಲ್ಲಿ ನಡೆಸಿದ ಕೌನ್ಸಲಿಂಗ್‌ನಲ್ಲಿ ಸ್ಥಳವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

ಸದರಿ ಅಭ್ಯರ್ಥಿಗಳು ನೇಮಕಗೊಂಡು 6-7 ತಿಂಗಳಾದರೂ ಕ್ಷೇತ್ರಶಿಕ್ಷಣಾಧಿಕಾರಿಗಳು ಅಭ್ಯರ್ಥಿಗಳಿಗೆ ವೇತನವನ್ನು ಪಾವತಿಸಲು ಕ್ರಮವಹಿಸಿರುವುದಿಲ್ಲವೆಂದು ದೂರು ಬಂದಿರುತ್ತವೆ.

ಈ ಹಿನ್ನೆಲೆಯಲ್ಲಿ ಇದು ಅತಿ ಜರೂರು ಎಂದು ತಿಳಿದು ಆದ್ಯತೆ ಮೇರೆಗೆ ನೇಮಕಗೊಂಡ ಅಭ್ಯರ್ಥಿಗಳಲ್ಲಿ ಸಿಂಧುತ್ವ ಪ್ರಮಾಣ ಪತ್ರ, ವಿದ್ಯಾರ್ಹತೆ ಪ್ರಮಾಣಪತ್ರಗಳು ಮತ್ತಿತರೆ ಅರ್ಹತಾ ದಾಖಲೆಗಳ ಪರಿಶೀಲನೆಯಾಗಿರುವ ಅಭ್ಯರ್ಥಿಗಳಿಗೆ ಕೂಡಲೇ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ನೇಮಕಗೊಂಡ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ವೇತನದಲ್ಲಿ ವೇತನವನ್ನು ಸೆಳೆಯಲು ಕ್ರಮವಹಿಸಿ ಈ ಕಛೇರಿಗೆ ವರದಿಯನ್ನು ಸಲ್ಲಿಸಲು ತಿಳಿಸಿದೆ.

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಪ್ರತಿಯನ್ನು

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇವರಿಗೆ ಅಗತ್ಯ ಕ್ರಮಕ್ಕಾಗಿ
3. ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು ಇವರಿಗೆ
4. ಮುಖ್ಯ ಲೆಕ್ಕಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ , ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ
5. ಸಹಾಯಕ ನಿರ್ದೇಶಕರು, ಹೆಚ್.ಆರ್.ಎಂ.ಎಸ್. ಶಾಖೆ, ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ನೀಡುತ್ತಾ ಕ್ಷೇತ್ರಶಿಕ್ಷಣಾಧಿಕಾರಿಗಳ ಆನ್‌ಲೈನ್ ಮನವಿಯನ್ನು ತುರ್ತಾಗಿ ಅನುಮೋದಿಸಿ ವೇತನ ಬಿಡುಗಡೆಗೆ ಕ್ರಮವಹಿಸಲು ತಿಳಿಸಿದೆ
6. ಕಛೇರಿ ಪ್ರತಿ